ಹಿರಿಯ ಸ್ನೇಹಿ ಕರ್ನಾಟಕ – ನಮ್ಮ ಗುರಿ

# ಡೆಲಿರಿಯಂ ಬಗ್ಗೆ ಮಾಹಿತಿ



## ಹಿರಿಯ ವಯಸ್ಕರಲ್ಲಿ "ಡೆಲಿರಿಯಂ" (ಕನ್ಫ್ಯೂಷನ್ ಅಥವಾ ಗೊಂದಲ) ಎಂಬ ಸ್ಥಿತಿ

ಹಿರಿಯ ವಯಸ್ಕರಲ್ಲಿ ಯಾವುದೇ ವಿಧವಾದ ದೈಹಿಕ ಅನಾರೋಗ್ಯ ಉಂಟಾದರೆ, ಅದರ ಕಾರಣದಿಂದ ಮೆದುಳಿನ ಮೇಲೆ ಪರಿಣಾಮ ಬೀರಿ ಗೊಂದಲ ಉಂಟಾಗುತ್ತದೆ. ಗೊಂದಲ (ಕನ್ಫ್ಯೂಷನ್) ಎಂದರೆ ತಮ್ಮ ಸ್ವಂತ ಗುರುತು, ಹತ್ತಿರ ಸಂಬಂಧಿಯ ಗುರುತು, ತಾವು ಯಾರು, ತಾವು ಎಲ್ಲಿದ್ದೇವೆ, ಈಗಿನ ಸಮಯ, ಹೊತ್ತು, ದಿನ, ದಿನಾಂಕ, ವಾರ, ತಿಂಗಳು, ವರ್ಷ ಇವುಗಳ ಅರಿವು ತಾತ್ಕಾಲಿಕವಾಗಿ ಇಲ್ಲದಿರುವುದು. ಡೆಲಿರಿಯಂ ಡಿಮೆನ್ಷಿಯಾ ತರಹ ಕಾಣಿಸಿದರೂ ಈ ಸ್ಥಿತಿ ಹೆಚ್ಚಿನ ಮಂದಿಯಲ್ಲಿ ತಾತ್ಕಾಲಿಕ ಮಾತ್ರ.

## ಡೆಲಿರಿಯಂನ ಮುಖ್ಯ ಲಕ್ಷಣಗಳು :

- ಪ್ರಜ್ಞಾವ್ಯವಸ್ಥೆಯ ಮಟ್ಟದಲ್ಲಿ ಏರಿಳಿತ
- ಸೂರ್ಯಾಸ್ತದ ಸಮಯದಲ್ಲಿ ಗೊಂದಲ ಕಾಣಿಸಿಕೊಳ್ಳುವುದು
- ರಾತ್ರಿಯಿಡೀ ಗೊಂದಲ ಹೆಚ್ಚಾಗಿ ನಿದ್ರಾಹೀನತೆ ಅನುಭವಿಸುವುದು
- ವ್ಯಕ್ತಿಯ ಈ ಸ್ಥಿತಿ ಇದ್ದಕ್ಕಿದ್ದ ಹಾಗೆ ಶುರುವಾಗಿರುತ್ತದೆ


ಸಹಯೋಗ

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ

ಕರ್ನಾಟಕ ರಾಜ್ಯ ಹಿರಿಯ ನಾಗರೀಕ ಸಂಪನ್ಮೂಲ ಕೇಂದ್ರ, ಕರ್ನಾಟಕ ಸರ್ಕಾರ

ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ

## ಇತರೆ ಲಕ್ಷಣಗಳು:

- ➢ ಭಯಪಡುವುದು, ಮುಂಗೋಪ, ಸ್ವಭಾವದಲ್ಲಿ ಬದಲಾವಣೆ
- ➢ ರಕ್ತದೊತ್ತಡ ಹಾಗೂ ಎದೆ ಬಡಿತದಲ್ಲಿ ಏರುಪೇರು
- ➢ ಇಂದ್ರಿಯಗಳ ಗ್ರಹಿಕೆಯಲ್ಲಿ ಏರುಪೇರು ಹಾಗೂ ತಪ್ಪು ಕಲ್ಪನೆ
- ➢ ಇಡೀ ರಾತ್ರಿ ಅಲೆದಾಟ ಹಾಗೂ ಚಡಪಡಿಕೆ
- ➢ ಗುರುತು ಹಿಡಿಯದೆ ಮನೆ ಬಿಟ್ಟು ಅಥವಾ ಆಸ್ಪತ್ರೆ ಬಿಟ್ಟು ಹೊರಗೆ ಹೋಗಿ ಬಿಡುವುದು

## ಡೆಲಿರಿಯಂ ಸ್ಥಿತಿ ಬರಲು ಕೆಲವು ಕಾರಣಗಳು:

- ★ ಮೂತ್ರನಾಳಗಳ ಅಥವಾ ಶ್ವಾಸಕೋಶದ ಸೋಂಕು
- ★ ರಕ್ತದಲ್ಲಿ ಸೋಡಿಯಂ, ಪೊಟ್ಯಾಶಿಯಂ ಲವಣಗಳ ಹೆಚ್ಚಿನ ಅಥವಾ ಕಡಿಮೆ ಅಂಶ
- ★ ಮಧುಮೇಹ ಖಾಯಿಲೆಯಿರುವ ವ್ಯಕ್ತಿಗೆ ಅತೀ ಕಡಿಮೆ ಅಥವಾ ಅತಿ ಹೆಚ್ಚು ಪ್ರಮಾಣದ ಸಕ್ಕರೆ ಇರುವುದು
- ★ ಹೃದಯ ಅಥವಾ ಮೆದುಳಿನ ಭಾಗದ ರಕ್ತನಾಳಗಳಲ್ಲಿ ಸಂಬಂಧ ಪಟ್ಟ ರೋಗಗಳು (ಪಾರ್ಶ್ವವಾಯು)

– ಇತರೆ ಅನೇಕ ರೀತಿಯ ದೈಹಿಕ ಅನಾರೋಗ್ಯದಿಂದ ಡೆಲಿರಿಯಂ ಆಗಬಹುದು

## ಡೆಲಿರಿಯಂಗೆ ಮುಖ್ಯ ಚಿಕಿತ್ಸೆ ಏನು?

ಈ ಸ್ಥಿತಿಯ ದೈಹಿಕ ಅನಾರೋಗ್ಯದ ಕಾರಣವನ್ನು ಕಂಡುಹಿಡಿದು ಅದಕ್ಕೆ ಸೂಕ್ತವಾದ ಚಿಕಿತ್ಸೆ ನೀಡುವುದು. ಕೆಲವೊಮ್ಮೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಬೇಕಾಗುವುದು. ಜನರಲ್ ಫಿಜಿಶಿಯನ್ ಅಥವಾ ಜೆರಿಯಾಟ್ರಿಕ್ ಫಿಜಿಶಿಯನ್ (ತಜ್ಞ ವೈದ್ಯರು)ಗಳು ಇದಕ್ಕೆ ಸೂಕ್ತ ಪರೀಕ್ಷೆಗಳನ್ನು ನಡೆಸಿ ಚಿಕಿತ್ಸೆ ನೀಡಬಲ್ಲರು. ಸ್ವಭಾವ ಅಥವಾ ವ್ಯಕ್ತಿಯ ವರ್ತನೆಯಲ್ಲಿ ಏರುಪೇರಾದಾಗ ತಜ್ಞವೈದ್ಯರ ಸಹಾಯದೊಂದಿಗೆ ಚಿಕಿತ್ಸೆ ನೀಡುವರು. ಹಿರಿಯ ವಯಸ್ಕರಲ್ಲಿ ಇನ್ನೊಂದು ಲಕ್ಷಣವೆಂದರೆ ದೈಹಿಕ ಅನಾರೋಗ್ಯದ ಕಾರಣವನ್ನು ತಿಳಿದು ಅದಕ್ಕೆ ನೀಡಿದ ಬಳಿಕವೂ ಸುಮಾರು ಎರಡು ವಾರದವರೆಗೂ ಕೂಡ ಏರಿಳಿತವು ಕಂಡು ಬರುವುದು. ಹೆಚ್ಚಿನ ಮಾಹಿತಿ ಮತ್ತು ಸಲಹೆಗಾಗಿ ತಮ್ಮ ಹತ್ತಿರದ ಫ್ಯಾಮಿಲಿ ಡಾಕ್ಟರ್ ಇವರನ್ನು ಸಂಪರ್ಕಿಸಬಹುದು.